**ದಿನಾಂಕಃ 04.02.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ನಂ.1 ರ ಪರ ಶ್ರೀ ಬಿ ಎಸ್ ಹೆಚ್ ವಕೀಲರಿಂದ.**

ನೀವು ಎಲ್ಲಿ ವಾಸ ಇರುತ್ತೀರಿ ಅಂದರೆ ಸಾಕ್ಷಿ ಬೆಂಗಳೂರಿನಲ್ಲಿ ವಾಸ ಇರುತ್ತೇನೆ ಎನ್ನುತ್ತಾರೆ. ನಿಮ್ಮ ಮದುವೆ ಯಾವಾಗ ಆಗಿರುತ್ತದೆ ಅಂದರೆ ಸಾಕ್ಷಿ 1997 ರಲ್ಲಿ ಎನ್ನುತ್ತಾರೆ. ನೀವು ಸಾಕ್ಷಿ ಹೇಳಿದ ನಂತರ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಆ ದಾಖಲೆಗಳನ್ನು ಎಲ್ಲಿಂದ ತಂದಿರುತ್ತೀರಿ ಅಂದರೆ ಸಾಕ್ಷಿ ಮುನ್ಸಿಪಾಲ್ಟಿಯಿಂದ ಕೆಲವು ದಾಖಲೆಗಳನ್ನು ತೆಗೆದುಕೊಂಡು ಬಂದಿರುತ್ತೇನೆ ಮತ್ತು ಕೆಲವು ದಾಖಲೆಗಳನ್ನು ನಮಗೆ ಗೊತ್ತಿರುವವರು ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆಯ ಸೇವೆಗೆ ಸಂಬಂಧಪಟ್ಟ ದಾಖಲೆಗಳನ್ನು ಯಾರು ಕೊಟ್ಟಿರುತ್ತಾರೆ ಅಂದರೆ ಸಾಕ್ಷಿ ಭದ್ರಾವತಿಯ ವಿ ಐ ಎಸ್ ಎಲ್ ಕಾರ್ಖಾನೆಯ ಕಚೇರಿಯಿಂದ ಪಡೆದು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನೀವು ವಿ ಐ ಎಸ್ ಎಲ್ ಕಾರ್ಖಾನೆಯ ಕಚೇರಿಯಿಂದ ದಾಖಲೆ ಪಡೆಯಲು ಯಾವ ದಿನಾಂಕದಂದು ಅರ್ಜಿ ಕೊಟ್ಟಿರುತ್ತೀರಿ ಮತ್ತು ಯಾವ ದಿನಾಂಕದಂದು ನಿಮಗೆ ದಾಖಲೆಗಳು ದೊರೆತಿರುತ್ತವೆ ಅಂದರೆ ಸಾಕ್ಷಿ ನನ್ನ ಸಹೋದರ ದಾಖಲೆಗಳನ್ನು ತೆಗೆದುಕೊಂಡು ಬಂದು ಕೊಟ್ಟಿರುತ್ತಾನೆ ಆದ ಕಾರಣ ನನಗೆ ಅರ್ಜಿ ಕೊಟ್ಟ ದಿನಾಂಕ ಮತ್ತು ದಾಖಲೆ ಪಡೆದ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ನೀವು ಹಾಜರುಪಡಿಸಿರುವ ದಾಖಲೆಗಳನ್ನು ನಿಮ್ಮ ಸಹೋದರ ವಿ ಐ ಎಸ್ ಎಲ್ ಕಾರ್ಖಾನೆಯ ಕಚೇರಿಯಲ್ಲಿ ಹೇಳಿ ಬರೆಯಿಸಿ ಸೃಷ್ಟಿ ಮಾಡಿ ತಂದು ಕೊಟ್ಟ ದಾಖಲೆಗಳಿರುತ್ತವೆ ಅಂದರೆ ಸರಿಯಲ್ಲ. ನಿಮ್ಮ ತಂದೆ ಯಾವಾಗ ಜನಿಸಿರುತ್ತಾರೆ ಅಂದರೆ ಸಾಕ್ಷಿ ದಿನಾಂಕಃ 15.08.1947

ರಂದು ಎನ್ನುತ್ತಾರೆ. ನಿಮ್ಮ ತಂದೆ ದಿನಾಂಕಃ 16.04.1946 ರಲ್ಲಿ ಜನಿಸಿರುತ್ತಾರೆ ಅಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸಾಕ್ಷಿ ಕೆಲವು ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ ಎನ್ನುತ್ತಾರೆ. ನೀವು, ವಾದಿ ನಂ.1,3 ಮತ್ತು 4 ರವರು ಎಲ್ಲಿ ಹುಟ್ಟಿ ಬೆಳೆದಿರುತ್ತೀರಿ ಅಂದರೆ ಸಾಕ್ಷಿ ಭದ್ರಾವತಿಯಲ್ಲಿ ಎನ್ನುತ್ತಾರೆ. ನಿಮ್ಮ ತಂದೆ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಅಂದರೆ ಸಾಕ್ಷಿ ಎಸ್ ಎಸ್ ಎಲ್ ಸಿ ವರೆಗೆ ಎನ್ನುತ್ತಾರೆ. ನಿಮ್ಮ ತಂದೆ 10 ನೇ ತರಗತಿಯನ್ನು ಎಲ್ಲಿ ಮುಗಿಸಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆ ಹೇಳಿದ ಪ್ರಕಾರ ಹೊಸನಗರದಲ್ಲಿ ಎನ್ನುತ್ತಾರೆ. ನನ್ನ ತಂದೆ ಮತ್ತು ಅವರ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ನಿಮ್ಮ ತಂದೆ ಎಸ್ ಎಸ್ ಎಲ್ ಸಿ ಯಲ್ಲಿ ಉತ್ತೀರ್ಣರಾಗಿರುತ್ತಾರೋ ಅಥವಾ ಅನುತ್ತೀರ್ಣರಾಗಿರುತ್ತಾರೋ ಅಂದರೆ ಸಾಕ್ಷಿ ನನ್ನ ತಂದೆ ಹೇಳಿದ ಪ್ರಕಾರ ಅನುತ್ತೀರ್ಣರಾಗಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆಯ ಎಸ್ ಎಸ್ ಎಲ್ ಸಿ ಅಂಕಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಅಂದರೆ ಸಾಕ್ಷಿ ಅಂಕಪಟ್ಟಿಯನ್ನು ಹುಡುಕುತ್ತೇನೆ ಸಿಕ್ಕರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಿಮ್ಮ ತಂದೆ ಭದ್ರಾವತಿಯ ಯಾವ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ ಅಂದರೆ ಸಾಕ್ಷಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಎನ್ನುತ್ತಾರೆ. ನಿಮ್ಮ ತಂದೆ ವಿ ಐ ಎಸ್ ಎಲ್ ಕಾರ್ಖಾನೆಗೆ ಎಸ್ ಎಸ್ ಎಲ್ ಸಿ ಉತ್ತೀರ್ಣರಾಗಿರುತ್ತೇನೆಂದು ಸೇರಿಕೊಂಡಿರುತ್ತಾರೊ ಅಥವಾ ಅನುತ್ತೀರ್ಣರಾಗಿರುತ್ತೇನೆಂದು ಸೇರಿಕೊಂಡಿರುತ್ತಾರೊ ಅಂದರೆ ಸಾಕ್ಷಿ

ಅನುತ್ತೀರ್ಣರಾಗಿರುತ್ತೇನೆಂದು ಹೇಳಿ ಸೇರಿಕೊಂಡಿರುತ್ತಾರೆ ಎನ್ನುತ್ತಾರೆ. ನಾವು ಲಿಂಗಾಯಿತ ಜಾತಿಯವರು ಅಂದರೆ ಸರಿ. ನಿಮ್ಮ ತಂದೆ ವಿ ಐ ಎಸ್ ಎಲ್ ಕಾರ್ಖಾನೆಗೆ ಯಾವ ಇಸವಿಯಲ್ಲಿ ಸೇರಿಕೊಂಡಿರುತ್ತಾರೆ ಅಂದರೆ ಸಾಕ್ಷಿ 1973 ರಲ್ಲಿ ಎನ್ನುತ್ತಾರೆ. 1973 ರಲ್ಲಿ ಲಿಂಗಾಯಿತ ಜಾತಿ ಅಂತ್ಯಂತ ಹಿಂದೂಳಿದ ಜಾತಿ ಆಗಿರಲಿಲ್ಲ ಅಂದರೆ ಸರಿ. ನನ್ನ ತಂದೆ ನಾನು ಹಿಂದೂಳಿದ ಜಾತಿಯವನು ನನಗೆ ಆದಾಯ ಕಡಿಮೆ ಇರುತ್ತದೆಂದು ವಿ ಐ ಎಸ್ ಎಲ್ ಕಾರ್ಖಾನೆಗೆ ಕೆಲಸಕ್ಕೆ ಸೇರಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ಜನಿಸಿದ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸಾಕ್ಷಿ ನನಗೆ ಎಷ್ಟು ಗೊತ್ತೋ ಅಷ್ಟು ಮಾತ್ರ ಹೇಳ ಬಲ್ಲೆ ಎನ್ನುತ್ತಾರೆ. ನಿಮಗೆ 2 ನೇ ಪ್ರತಿವಾದಿ ಗೊತ್ತಾ ಅಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. 2 ನೇ ಪ್ರತಿವಾದಿಯ ಬಗ್ಗೆ ನಿಮಗೆ ತಿಳಿಸಿಕೊಟ್ಟವರು ಯಾರು ಅಂದರೆ ಸಾಕ್ಷಿ 2 ನೇ ಪ್ರತಿವಾದಿ ನನ್ನ ತಂದೆಯ ಅಕ್ಕ ಇರುತ್ತಾರೆ ಹಾಗಾಗಿ ಗೊತ್ತು ಎನ್ನುತ್ತಾರೆ. 2 ನೇ ಪ್ರತಿವಾದಿ ನಿಮಗೆ ಯಾವಾಗಿನಿಂದ ಗೊತ್ತು ಅಂದರೆ ಸಾಕ್ಷಿ ನಾನು ಹುಟ್ಟಿದಾಗಿನಿಂದ ಗೊತ್ತು ಎನ್ನುತ್ತಾರೆ. ದಾವಾ ಹಾಕಿದಾಗ 2 ನೇ ಪ್ರತಿವಾದಿಯನ್ನು ಪಕ್ಷಗಾರರಾಗಿ ಮಾಡಲು ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ ದಾವಾ ಹಾಕಿದ ನಂತರ ಅವರಿಗೂ ಸಹ ಆಸ್ತಿಯಲ್ಲಿ ಹಕ್ಕು ಇರುತ್ತದೆಂದು ಗೊತ್ತಾಗಿರುತ್ತದೆ ಆದ ಕಾರಣ ಅವರನ್ನು ಪಕ್ಷಗಾರರಾಗಿ ಸೇರ್ಪಡೆ ಮಾಡಿರುತ್ತೇವೆ ಎನ್ನುತ್ತಾರೆ. ದಾವಾ ಹಾಕುವ ಕಾಲಕ್ಕೆ 2 ನೇ ಪ್ರತಿವಾದಿ ಇರುವಿಕೆಯ ಬಗ್ಗೆ ನನಗೆ ಗೊತ್ತಿರಲಿಲ್ಲ ಅಂದರೆ ಸರಿಯಲ್ಲ. ಶ್ರೀದೇವಿ ಇರುವಿಕೆಯ ಬಗ್ಗೆ ಲತಾ ಎಂಬುವವರು ನನಗೆ ಮತ್ತು 1 ನೇ ವಾದಿಗೆ ತಿಳಿಸಿರುತ್ತಾರೆ ಅಂದರೆ ಸರಿಯಲ್ಲ. ನನಗೆ ಮತ್ತು 1 ನೇ ವಾದಿಗೆ ಪ್ರತಿವಾದಿಯವರ ಸಂಪರ್ಕ

ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಾಗಿ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಾಗಿ ಯಾವತ್ತು ನಿರ್ವಹಣೆ ಮಾಡಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಾಗಿ ದಾವಾ ಸ್ವತ್ತನ್ನು ಬಾಡಿಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ನವೀಕರಣಗೊಳಿಸುವ ವಿಚಾರ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಅಂದರೆ ಸಾಕ್ಷಿ ಜನವರಿ 2025 ರಲ್ಲಿ ಗೊತ್ತಾಗಿರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಒಬ್ಬರೆ ನಿವರ್ಹಣೆ ಮಾಡುತ್ತಾರೆ ಅಂದರೆ ಸರಿಯಲ್ಲ. ನಿಮ್ಮ ತಂದೆಯ ತಂದೆ ಹೆಸರು ಏನು ಅಂದರೆ ಸಾಕ್ಷಿ ಜಿ ಸಾವಲಿಂಗಪ್ಪ ಎನ್ನುತ್ತಾರೆ. ಜಿ ಸಾವಲಿಂಗಪ್ಪರವರಿಗೆ ಎಷ್ಟು ಜನ ಸಹೋದರರು ಅಂದರೆ ಸಾಕ್ಷಿ ರೇವಪ್ಪ ಮತ್ತು ರೇವಣ್ಣೆಪ್ಪ ಇಬ್ಬರು ಎನ್ನುತ್ತಾರೆ. ದಾವಾ ಆಸ್ತಿ ನಿಮ್ಮ ಅಜ್ಜನಿಗೆ ಹೇಗೆ ಬಂದಿರುತ್ತದೆ ಅಂದರೆ ಸಾಕ್ಷಿ ನನ್ನ ಅಜ್ಜನ ಅಪ್ಪನಿಂದ ನನ್ನ ಅಜ್ಜನಿಗೆ ಬಂದಿರುತ್ತದೆ ಎನ್ನುತ್ತಾರೆ.

ನನ್ನ ತಂದೆಯನ್ನು ದಿನಾಂಕಃ08.09.1948 ರಂದು ನಾಗಮ್ಮ ಕೋಂ ಬಸವಣ್ಣೆಪ್ಪರವರಿಗೆ ದತ್ತಕ ಕೊಡಲಾಗಿತ್ತು ಅಂದರೆ ಸರಿಯಲ್ಲ. ದಿನಾಂಕಃ 08.09.1948 ರಂದು ನಾಗಮ್ಮ ಕೋಂ ಬಸವಣ್ಣೆಪ್ಪರವರು ನೊಂದಾಯಿತ ದತ್ತುಪತ್ರದ ಮೂಲಕ ನನ್ನ ತಂದೆಯನ್ನು ದತ್ತಕ ತೆಗೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ನಾಗಮ್ಮ ಕೋಂ ಬಸವಣ್ಣೆಪ್ಪರವರಿಗೆ ದತ್ತಕ ಹೋದ ವಿಷಯವನ್ನು ನಮಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ನನ್ನ ತಂದೆ ನಾಗಮ್ಮ ಕೋಂ ಬಸವಣ್ಣೆಪ್ಪರವರಿಗೆ ದತ್ತಕ ಹೋದ ವಿಷಯ ನನಗೆ ಗೊತ್ತಿದ್ದರು

ಸಹ ದತ್ತಕ ಹೋಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ನಾಗಮ್ಮ ಕೋಂ ಬಸವಣ್ಣಪ್ಪರವರ ಕುಟುಂಬದ ಸದಸ್ಯರಾಗಿ ಬೆಳೆದಿದ್ದರು ಅಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಅಜ್ಜನಿಗೆ ದಿನಾಂಕಃ 01.02.1956 ರ ನೊಂದಾಯಿತ ಪಾಲು ವಿಭಾಗಪತ್ರದ ಮೂಲಕ ಬಂದಿರುತ್ತದೆ ಅಂದರೆ ಸರಿ. ದಿನಾಂಕಃ 01.02.19556 ರಂದು ನನ್ನ ತಂದೆ ಜಿ ಸಾವಲಿಂಗಪ್ಪರವರ ಕುಟುಂಬದ ಸದಸ್ಯರಾಗಿರಲಿಲ್ಲ ಅಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.